**<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.</u>**

**<u>Spl.C. 156/2021</u>**

**P.W.- 7**
**C.W.- 25**

| | | |
|---|---|---|
| ಹೆಸರು | : | ಶೇಖರ್ ಜಿ |
| ತಂದೆಯ ಹೆಸರು | : | ಗುರುಬಸವೇಗೌಡ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಪೊಲೀಸ್ ಇನ್ಸ್‌ಪೆಕ್ಟರ್ , ಜಾಲಹಳ್ಳಿ ಸಂಚಾರ ಪೊಲೀಸ್ ಠಾಣೆ , ಬೆಂಗಳೂರು |
| ವಾಸಸ್ಥಳ | : | ಬೆಂಗಳೂರು |

**<u>ದಿನಾಂಕಃ 02.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**
**<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –</u>**

2. ದಿ.07.01.2018 ರಿಂದ 11.11.2019 ರವರೆಗೆ ಎ ಸಿ ಬಿ ಪೊಲೀಸ್ ಠಾಣೆ, ಮೈಸೂರು ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

3. ದಿ.10.07.2019 ರಂದು ನಾನು ಠಾಣೆಯಲ್ಲಿ ಇರುವಾಗ ಚಾಸಾ.24 ರವರು ಜ್ಞಾಪನವನ್ನು ನೀಡಿ, ತನಿಖೆಯನ್ನು ಮುಂದುವರೆಸುವಂತೆ ಕಡತ ಮತ್ತು ಪಿರ್ಯಾದಿ ಹಾಜರುಪಡಿಸಿದ್ದ , 10,000/– ಹಣ ಮತ್ತು ಒಂದು ಮೆಮೋರಿ ಚಿಪ್ ನ್ನು ನೀಡಿದ್ದು, ಅದನ್ನು ಪಡೆದು ಪರಿಶೀಲಿಸಿ, ತನಿಖೆಯನ್ನು ಮುಂದುವರೆಸಿರುತ್ತೇನೆ. ಸಾಕ್ಷಿಯೂ ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ದಿ.10.07.2019 ಜ್ಞಾಪನವನ್ನು

(ಪುಟ ಸಂಖ್ಯೆ 12) ಆಗಿದ್ದು, ಅದನ್ನು ನಿಪಿ.31 ಎಂದು , ಸಾಕ್ಷಿಯ ಸಹಿಯನ್ನು ನಿಪಿ. 31(ಎ) ಎಂದು ಗುರುತಿಸಲಾಯಿತು.

4. ನಂತರ ಪಿರ್ಯಾದಿಯವರನ್ನು ವಿಚಾರಣೆ ಮಾಡಿ, ಪಂಚರ ನ್ನು ಕರೆಸುವ ಸಲುವಾಗಿ ಪ್ರಾಂಶುಪಾಲರು , ಐಟಿಐ , ಮೈಸೂರು ರವರಿಗೆ ಪಂಚರನು ಕಳುಹಿಸಿಕೊಡುವಂತೆ ಕೋರಿ ಚಾಸಾ.21 ರವರ ಮುಖಾಂತರ ಪತ್ರವನ್ನು ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿಯೂ ದಿ.10.07.2019 ರ ಪತ್ರವನ್ನು (ಪುಟ ಸಂಖ್ಯೆ 13)ನೋಡಿ ಗುರುತಿಸಿದ್ದು, ಅದನ್ನು ನಿಪಿ.32 ಎಂದು, ಸಾಕ್ಷಿಯ ಸಹಿಯನ್ನು ನಿಪಿ.32(ಎ) ಎಂದು ಗುರುತಿಸಲಾಯಿತು. ಸದರಿ ಪತ್ರದಲ್ಲಿ ಯಾವ ಸಾಕ್ಷಿದಾರರನ್ನು ನಿಯೋಜಿಸಿರುತ್ತಾರೆ ಎಂಬುದರ ಬಗ್ಗೆಯೂ ಸಹ ನಮೂದಿಸಿ ದೇವೇಗೌಡ ಮತ್ತು ವಸಿ ಅಹಮದ್ ಖಾನ್ ರವರನ್ನು ಸಾಕ್ಷಿಯಾಗಿ ನಿಯೋಜಿಸಿದ ಬಗ್ಗೆ ನಮೂದಿಸಿ ಕಳುಹಿಸಿಕೊಟ್ಟಿರುತ್ತಾರೆ.

5. ನಂತರ ಸದರಿ ಸಾಕ್ಷಿದಾರರು ನನ್ನ ಮುಂದೆ ಹಾಜರಾಗಿದ್ದು , ಸದರಿಯವರಿಗೆ ಪರಸ್ಪರ ಪರಿಚಯ ಮಾಡಿಕೊಂಡು , ಪಿರ್ಯಾದುದಾರರಿಗೆ ಪರಿಚಯಿಸಿ , ಅವರು ದೂರು ನೀಡಿರುವ ವಿಚಾರವನ್ನು ತಿಳಿಸಿ, ದೂರಿನ ಪ್ರತಿಯನ್ನು ಓದಲು ನೀಡಿದ್ದು, ಪಿರ್ಯಾದುದಾರರೊಂದಿಗೆ ಅದರ ಬಗ್ಗೆ ಚರ್ಚೆ ಮಾಡಲು ಸೂಚಿಸಿರುತ್ತೇನೆ. ನಂತರ ಅವರುಗಳಲ್ಲಿ ವಸಿ ಅಹಮದ್ ಖಾನ್ ರವರನ್ನು ಪಂಚ ಸಾಕ್ಷಿ-1 ಎಂದು, ದೇವೇಗೌಡ ರವರನ್ನು ಪಂಚ ಸಾಕ್ಷಿ-2 ಎಂದು ನಾಮಕರಣ ಮಾಡಿ, ಸದರಿಯವರಿಗೆ ತಿಳಿಸಿ, ಅವರಿಗೆ ನೋಟೀಸ್ ನ್ನು ಜಾರಿ ಮಾಡಿರುತ್ತೇನೆ. ನಂತರ ಪಿರ್ಯಾದಿ ಹಾಜರುಪಡಿಸಿದ ಹಣ ರೂ.10,000/- ಗಳನ್ನು 500 ಮುಖ ಬೆಲೆಯ 20 ನೋಟುಗಳನ್ನು ಪಂಚ ಸಾಕ್ಷಿ-1 ರವರಿಗೆ ಕೊಡಿಸಿ ಅವುಗಳ ಮೌಲ್ಯ ಮತ್ತು ಕ್ರಮ ಸಂಖ್ಯೆ ಹೇಳುವಂತೆಯೂ ಪಂಚ

ಸಾಕ್ಷಿ-2 ರವರಿಗೆ ಸದರಿ ವಿವರಗಳನ್ನು ಒಂದು ಬಿಳಿ ಹಾಳೆಯಲ್ಲಿ ಬರೆದುಕೊಳ್ಳುವಂತೆ ತಿಳಿಸಿ, ಅದರಂತೆ ಪಂಚ ಸಾಕ್ಷಿ-1 ರವರು ಕ್ರಮವಾಗಿ ತಿಳಿಸಿದ್ದನ್ನು ಪಂಚ ಸಾಕ್ಷಿ-2 ರವರು ಬರೆದುಕೊಂಡಿರುತ್ತಾರೆ. ಸದರಿ ಹಾಳೆಗೆ ನಾನು ಮತ್ತು ಪಂಚರು, ಮತ್ತು ಪಿರ್ಯಾದಿದಾರರು ಸಹಿ ಹಾಕಿರುತ್ತೇನೆ. ಸಾಕ್ಷಿಯೂ ನಿಪಿ.2 (ಪುಟ ಸಂಖ್ಯೆ 47) ಅನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಗಿರುತ್ತದೆ .

6. ನಂತರ ಸದರಿ ನೋಟುಗಳನ್ನು ಪಂಚ ಸಾಕ್ಷಿ-1 ರವರಿಂದ ಪಡೆದು, ಠಾಣಾ ಸಿಬ್ಬಂದಿ ಪುಷಲತಾ (ಚಾಸಾ.18) ರವರಿಗೆ ನೀಡಿದ್ದು, ಸದರಿಯವರು ನೋಟುಗಳ ಮೇಲ್ ಫಿನಾಪ್ತಲಿನ್ ಪೌಡರ್ ನ್ನು ಹಚ್ಚಿದ್ದು , ಸದರಿ ನೋಟುಗಳನ್ನು ಪುನಃ ಪಂಚ-1 ರವರಿಗೆ ನೀಡಿ , ಅವುಗಳ ಕ್ರಮ ಸಂಖ್ಯೆಗಳನ್ನು ಪರಿಶೀಲಿಸುವಂತೆ ತಿಳಿಸಿದ್ದು, ಅದನ್ನು ಪಂಚ-2 ರವರು ಬರೆದುಕೊಂಡಿದ್ದ ನೋಟುಗಳ ವಿವರಗಳಿಗೆ ತಾಳೆ ಹಾಕಿ ಪರಿಶೀಲಿಸಿದಾಗ ಅವುಗಳು ಸರಿಯಾಗಿರುತ್ತವೆ. ಸದರಿ ಹಣವನ್ನು ಪಂಚ-1 ರವರಿಂದ ಪಿರ್ಯಾದಿಯವರು ಧರಿಸಿದ ಶರ್ಟ್ ನ ಎಡಭಾಗದಲ್ಲಿರುವ ಜೇಬಿ ನಲ್ಲಿ ಇರಿಸಲಾಯಿತು. ನಂತರ ಪಿರ್ಯಾದಿಯವರಿಗೆ ಸದರಿ ಹಣವನ್ನು ತಮ್ಮ ಬಳಿಯೇ ಇಟ್ಟುಕೊಳ್ಳುವಂತೆ ಆರೋಪಿತರು ಕೇಳಿದಾಗ ಕೊಡುವಂತೆ ಸೂಚಿಸಲಾಯಿತು. ಹಾಗೆಯೇ ಪಂಚ-1 ರವರಿಗೆ ನೋಟಿನ ಮೇಲೆ ವಿವರದ ಹಾಳೆಯನ್ನು ಇಟ್ಟುಕೊಳ್ಳವಂತೆ, ಆರೋಪಿ ಹಣವನ್ನು ಸ್ವೀಕರಿಸಿದ ನಂತರ ತಾಳೆ ಮಾಡಬೇಕಾಗಿ ಇರುವುದರಿಂದ ತಮ್ಮಲ್ಲಿಯೇ ಇಟ್ಟುಕೊಳ್ಳಲು ತಿಳಿಸಿರುತ್ತೇನೆ. ನೋಟುಗಳಿಗೆ ಲೇಪನ ಮಾಡಿ ಉಳಿದ ಪಿನಾಪ್ತಲಿನ್ ಪುಡಿಯನ್ನು ಒಂದು ಬಿಳಿ ಪೇಪರ್ ನಲ್ಲಿ ಪೊಟ್ಟಣ ಕಟ್ಟಿ , ನಂತರ ಒಂದು ಕವರ್ ನಲ್ಲಿ ಹಾಕಿ ಅಂಟಿಸಿ, **I** ಎಂಬ ಅಕ್ಷರದಿಂದ ಸೀಲ್ ಮಾಡಲಾಯಿತು. ಸದರಿ ವಸ್ತುವನ್ನು **Article** -1 ಎಂದು ಗುರುತಿಸಲಾಯಿತು. ಅದಕ್ಕೆ

ನಾವು ಮತ್ತು ಪಂಚರು ಸಹಿ ಹಾಕಿರುತ್ತೇವೆ. ಸದರಿ ವಸ್ತುವನ್ನು ಈಗಾಗಲೇ ಎಂಒ–8 ಎಂದು ಗುರುತಿಸಲಾಗಿದ್ದು , ಸಾಕ್ಷಿಯೂ ತನ್ನ ಸಹಿಯನ್ನು ಗುರುತಿಸಿರುತ್ತಾರೆ.

7. ನಂತರ ಠಾಣಾ ಸಿಬ್ಬಂದಿ ಚಾಸಾ.20 ರವರಿಗೆ ಒಂದು ಶುದ್ದೀಕರಿಸುವ ಒಂದು ಪ್ಲಾಸ್ಟಿಕ್ ಗ್ಲಾಸ್ ನಲ್ಲಿ ಸ್ವಲ್ಪ ಡಿಸ್ಟೀಲಡ್ ವಾಟರ್ ನ್ನು ಹಾಕಿ ಅದಕ್ಕೆ **Sodium Carbonate Powder** ಹಾಕಿ ಬೆರೆಸಿ, ಧ್ರಾವಣವನ್ನು ಸಿದ್ದಪಡಿಸಿ, ಆ ಧ್ರಾವಣ ಯಾವುದೇ ಬಣ್ಣಕ್ಕೆ ತಿರುಗದೇ ಇದ್ದು, ಅದನ್ನು ಪಂಚರು ಮತ್ತು ಪಿರ್ಯಾದುದಾರರಿಗೆ ಗಮನಿಸಲು ತಿಳಿಸಿರುತ್ತೇನೆ. ಸದರಿ ಧ್ರಾವಣದಿಂದ ಸ್ವಲ್ಪ ಧ್ರಾವಣವನ್ನು ತೆಗೆದು ಒಂದು ಬಾಟಲಿ ಗೆ ಹಾಕಿ , ಅದನ್ನು ಕಟ್ಟಿ, **I** ಎಂಬ ಅಕ್ಷರದಿಂದ ಸೀಲ್ ಮಾಡಿ , ಒಂದು ಲೇಬಲ್ ನಲ್ಲಿ ನಾವು ಮತ್ತು ಪಂಚರು ಸಹಿ ಮಾಡಿ, **Article**–2 ಎಂದು ಗುರುತಿಸಲಾಯಿತು. ಅದನ್ನು ಈಗಾಗಲೇ ಎಂಒ–2 ಎಂದು ಗುರುತಿಸಲಾಗಿದ್ದು , ಸಾಕ್ಷಿಯೂ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ನಂತರ ಪಂಚ–1 ರವರ ಎರಡು ಕೈ ಬೆರಳುಗಳನ್ನು ಚಾಸಾ.20 ರವರು ತಯಾರಿಸಿ ಧ್ರಾವಣದಲ್ಲಿ ತೊಳೆಸಿದಾಗ, ಧ್ರಾವಣವು ಪಿಂಕ್ ಬಣ್ಣಕ್ಕೆ ತಿರುಗಿರುತ್ತದೆ. ಸದರಿ ಧ್ರಾವಣವನ್ನು ಒಂದು ಬಾಟಲಿಗೆ ಹಾಕಿ, ಅದನ್ನು ಕಟ್ಟಿ, **I** ಎಂಬ ಅಕ್ಷರದಿಂದ ಸೀಲ್ ಮಾಡಿ , ಒಂದು ಲೇಬಲ್ ನಲ್ಲಿ ನಾವು ಮತ್ತು ಪಂಚರು ಸಹಿ ಮಾಡಿ, **Article**–3 ಎಂದು ಗುರುತಿಸಲಾಯಿತು. ಅದನ್ನು ಈಗಾಗಲೇ ಎಂಒ–1 ಎಂದು ಗುರುತಿಸಲಾಗಿದ್ದು , ಸಾಕ್ಷಿಯೂ ತನ್ನ ಸಹಿಯನ್ನು ಗುರುತಿಸಿರುತ್ತಾರೆ.

8. ನಂತರ ಆರೋಪಿತರು ಪಿರ್ಯಾದಿಯವರಿಗೆ ಮೊಬೈಲ್ ನಲ್ಲಿ ಲಂಚಕ್ಕಾಗಿ ಒತ್ತಾಯ ಮಾಡಿರುವ ಬಗ್ಗೆ ಪಿರ್ಯಾದಿ ಒಂದು ಮೆಮೋರಿ ಚಿಪ್ ನ್ನು ಹಾಜರುಪಡಿಸಿದ್ದು, ಸದರಿ ಮೊಮೋರಿ ಚಿಪ್ ನ್ನು ಪಂಚರಿಗೆ ತೋರಿಸಿ, ಅದನ್ನು **Card reader** ನಲ್ಲಿ ಲ್ಯಾಪ್ ಟಾಪ್ ಗೆ

ಹಾಕಿ ಕೇಳಿಸಲಾಗಿ , ಸದರಿ ಸಂಭಾಷಣೆಯು ಪಿರ್ಯಾದಿ ಮತ್ತು ಆರೋಪಿತರ ನಡುವೆ ನಡೆದಿದ್ದು, ಅದು ಒಟ್ಟು 2 ನಿಮಿಷ 28 ಸೆಕೆಂಡುಗಳು ಇದ್ದು, ಸದರಿ ಧ್ವನಿ ಮುದ್ರಿಕೆಯನ್ನು ಬರವಣಿಗೆ ರೂಪದಲ್ಲಿ **enterustment** ಮಹಜರ್ ನಲ್ಲಿ ಟೈಪ್ ಮಾಡಿಸಲಾಯಿತು. ನಂತರ ಸದರಿ ಸಂಭಾಷಣೆಯನ್ನು ದಿ.09.07.2019 ರಂದು ಆರೋತಪಿರು ಫೋನ್ ಮಾಡಿದಾಗ ತನ್ನ ಮೊಬೈಲ್ ನಲ್ಲಿ ರೆಕಾರ್ಡ ಮಾಡಿಕೊಂಡಿರುವುದಾಗಿ ತಿಳಿಸಿ, ಸಂಭಾಷಣೆಯನ್ನು ಗುರುತಿಸಿರುತ್ತಾರೆ. ನಂತರ ಸಂಭಾಷಣೆಯ ಫೈಲ್ ನ್ನು ಠಾಣಾ ಸಿಬ್ಬಂದಿ ಚಾಸಾ.23 ರವರ ಮೂಲಕ ಲ್ಯಾಪ್ ಟಾಪ್ ಮುಖಾಂತರ 2 ಸಿಡಿಗಳಿಗೆ ಕಾಪಿ ಮಾಡಿ, ಪ್ರತ್ಯೇಕವಾಗಿ 2 ಸಿಡಿ ಮೇಲ್‌ರ್ ಗಳಿಗೆ ಹಾಕಿ, ಅದಕ್ಕೆ ಎರಡು ಲೇಬಲ್ ಗಳನ್ನು ಪ್ರತ್ಯೇಕವಾಗಿ ಅಂಟಿಸಿ ಪ್ರಕರಣದ ವಿವರವನ್ನು ನಮೂದಿಸಿ ನಾನು ಮತ್ತು ಸಾಕ್ಷಿದಾರರು ಸಹಿ ಮಾಡಿರುತ್ತೇವೆ. ಸದರಿ ವಸ್ತುಗಳನ್ನು **Article**-4 ಮತ್ತು 4(ಎ) ಎಂದು ನಮೂದಿಸಿ, **I** ಎಂಬ ಅಕ್ಷರದಿಂದ ಸೀಲ್ ಮಾಡಲಾಗಿರುತ್ತದೆ.

9. ನಂತರ ಪಿರ್ಯಾದು ಹಾಜರುಪಡಿಸಿದ ಮೆಮೋರಿ ಚಿಪ್ ನ್ನು ಒಂದು ಕವರ್ ನಲ್ಲಿ ಹಾಕಿ ಲೇಬಲ್ ತಯಾರಿಸಿ , ನಾನು ಮತ್ತು ಪಂಚರು ಸಹಿ ಹಾಕಿ, ಅದಕ್ಕೆ **I** ಎಂಬ ಅಕ್ಷರದಿಂದ ಸೀಲ್ ಮಾಡಿ, ಅದನ್ನು **Article**-5 ಎಂದು ಗುರುತಿಸಲಾಗಿರುತ್ತದೆ . ಸಾಕ್ಷಿಯೂ ಸದರಿ ವಸ್ತುವನ್ನು ನೋಡಿ ಗುರುತಿಸಿದ್ದು , ಅದನ್ನು ಎಂಒ-3 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯೂ ತನ್ನ ಸಹಿಯನ್ನು ನೋಡಿ ಗುರತಿಸಿರುತ್ತಾರೆ.

10. ನಂತರ ನಾನು , ಪಂಚರು , ಪಿರ್ಯಾದುದಾರರು , ಸಿಬ್ಬಂದಿಗಳು ಎಲ್ಲರೂ ಕೈ ಗಳನ್ನು ಸ್ವಚ್ಛವಾಗಿ ತೊಳೆದು ಕೊಂಡಿರುತ್ತೇವೆ. ನಂತರ ಪಿರ್ಯಾದಿಯವರಿಗೆ ಒಂದು ಡಿಜಿಟಲ್ ವಾಯ್ಸ್

ರೆಕಾರ್ಡ್ ನ್ನು ನೀಡಿ, ಅದನ್ನು ಉಪಯೋಗಿಸುವ ಬಗ್ಗೆ ಪಿರ್ಯಾದಿಗೆ ತಿಳಿಸಿ , ಆರೋಪಿತರೊಡನೆ ನಡೆಸುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳುವಂತೆ ತಿಳಿಸಿ ಹಾಗೂ ಫಿನಾಪ್ತಲಿನ್ ಲೇಪಿತ ಹಣವನ್ನು ಮುಟ್ಟಬಾರದ್ದು ಎಂದು, ಹಾಗೂ ಆರೋಪಿ ಲಂಚದ ಹಣವನ್ನು ಕೇಳಿದಾಗ ನೀಡುವಂತೆ, ಹಾಗೂ ಹಣವನ್ನು ಆರೋಪಿ ಎಲ್ಲಿ ಇಟ್ಟುಕೊಳ್ಳುತ್ತಾನೆ ಎಂದು ಗಮನಿಸುವಂತೆ ಮತ್ತು ಹೊರಗಡೆ ಬಂದು ತಲೆಯನ್ನು ಬಲಗೈ ನಿಂದ ಸವರಿಕೊಳ್ಳುವ ಮೂಲಕ ನಮಗೆ ಸೂಚನೆ ನೀಡಬೇಕೆಂದು ತಿಳುವಳಿಕೆ ಕೊಟ್ಟು, ಪಂಚ–2 ರವರನ್ನು ಪಿರ್ಯದಿಯವರೊಟ್ಟಿಗೆ ಹೋಗಬೇಕೆಂದು, ಆರೋಪಿ ಮತ್ತು ಪಿರ್ಯಾದುದಾರರ ನಡುವೆ ನಡೆಯುವ ಸಂಭಾಷಣೆಯನ್ನು ಆಲಿಸುವಂತೆ, ಆರೋಪಿ ಲಂಚದ ಹಅವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದರ ಬಗ್ಗೆ ಗಮನಿಸಬೇಕೆಂದು ಸೂಚಿಸಿಸಲಾಗಿರುತ್ತದೆ. ನಂತರ ಈ ನಡಾವಳಿಗಳನ್ನು ಠಾಣಾ ಸಿಬ್ಬಂದಿ ಚಾಸಾ.21 ರವರಿಂದ ಪೋಟೋಗಳನ್ನು ತೆಗೆಸಲಾಗಿರುತ್ತದೆ. ಆ ಸಮಯದಲ್ಲಿ ಎಲ್ಲಾ ಪ್ರಕ್ರಿಯೆಗೆ ಸಂಬಂದಪಟ್ಟಂತೆ ಮಹಜರ್ ನ್ನು ಜರುಗಿಸಲಾಯಿತು . ಸದರಿ ಮಹರಜ್ ನ್ನು ಮದ್ಯಾಹ್ನ 01.10–03.00 ಗಂಟೆಯವರೆಗೆ ಠಾಣಾ ಸಿಬ್ಬಂದ ಚಾಸಾ. 23 ರವರಿಂದ ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿಸಲಾಯಿತು. ಸದರಿ ಮಹಜರ್ ಗೆ ನಾನು , ಸಿಬ್ಬಂದಿ, ಪಂಚರು ಮತ್ತು ಪಿರ್ಯದಿ ಸಹಿ ಹಾಕಿರುತ್ತೇವೆ. ಸಾಕ್ಷಿಯೂ ಮಹಜರ್ ನ್ನು ನೋಡಿ ಗುರುತಿಸಿದ್ಧು ಅದನ್ನು ಈಗಾಗಲೇ ನಿಪಿ.12 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ.12(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯೂ ಮಹಜರ್ ಕಾಲದಲ್ಲಿ ತೆಗೆದ ಪೋಟೊಗಳನ್ನು ನೋಡಿ ಗುರುತಿಸಿದ್ಧು ಅದನ್ನು ಈಗಾಗಲೇ ನಿಪಿ.3 ರಿಂದ 11 ಎಂದು ಗುರುತಿಸಲಾಗಿರುತ್ತದೆ. ಪ್ರತಿ ಪೋಟೋ ವನ್ನು ಅಂಟಿಸಿದ ಹಾಳೆಯ ಮೇಲೆ ನನ್ನ ಸಹಿ ಇರುತ್ತದೆ. ಸದರಿ ವಸ್ತುಗಳನ್ನು ಠಾಣಾ

ಮಾಲು ಪಟ್ಟಿ ಸಂಖ್ಯೆ 9/19 ರಲ್ಲಿ ಅಳವಡಿಸಿ, ಮಾನ್ಯ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯೂ ಮಾಲು ಪಟ್ಟಿ ಸಂಖ್ಯೆ 9/19 ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.33 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.33(ಎ) ಎಂದು ಗುರುತಿಸಲಾಯಿತು .

11. ನಂತರ ಇಲಾಖಾ ವಾಹನದಲ್ಲಿ ಸಿಬ್ಬಂದಿಗಳು , ಪಂಚರು , ಪಿರ್ಯಾದಿಯವರು ಮತ್ತು ನಾನು ಕಚೇರಿಯಿಂದ ಹೊರಟು, ಪಿರ್ಯದುದಾರರಿಗೆ ಆರೋಪಿ ಹೇಳಿದಂತೆ, ಮೈಸೂರು ನಗರ ಸಿಟಿ ಬಸ್ ಸ್ಟಾಂಡ್ ಬಳಿ ಮದ್ಯಾಹ್ಣ 03.20 ಕ್ಕೆ ಹೋಗಿ ಎಲ್ಲರನ್ನು ಅಲ್ಲಲ್ಲಿ ನಿಯೋಜಿಸಲಾಯಿತು. ಪಿರ್ಯಾದಿಯವರು ಪಂಚ-2 ರವರೊಂದಿಗೆ ಆರೋಪಿತರನ್ನು ಭೇಟಿ ಮಾಡಲು ಹೋಗುವಾಗ ಪಿರ್ಯಾದಿ ತನ್ನ ಮೊಬೈಲ್ ಸಂಖ್ಯೆ 8073072612 ರಿಂದ ಆರೋಪಿತರ ಮೊಬೈಲ್ ಗೆ ಪೋನ್ ಮಾಡಿದಾಗ , ಸದರಿಯವರು ತಾನು ರಾಮಸ್ವಾಮಿ ಸರ್ಕಲ್ ಬಳಿ ಇರುವುದಾಗಿ ತಿಳಿಸಿದ್ದು , ಅಲಿಲಗೆ ಬರಲು ಪಿರ್ಯಾದುರವರಿಗೆ ತಿಳಿಸಿದಾಗ, ಪಿರ್ಯದುದಾರರು ತನಗೆ ಕೆಲಸ ಇರುವುದಾಗಿ, ಆರೋಪಿತರಿಗೆ ಅಲ್ಲೀ ಇರುವಂತೆ ತಿಳಿಸಿರುತ್ತಾರೆ. ನಂತರ ಪಿರ್ಯದುದಾರರಿಗೆ ಆರೋಪಿತರು ಪುನಃ ಪೋನ್ ಮಾಡಿ , ನೀನು ಡಿಪೋ ಹತ್ತಿರ 05.00 ಗಂಟೆಗೆ ಬಂದು ಬಿಡು ಎಂದು ತಿಳಿಸಿದ್ದರಿಂದ, ನಾವುಗಳು ಅಲ್ಲಿಂದ ವಾಪಾಸ್ ಬಂದು, ನಂತರ ಪಿರ್ಯದುದಾರರು ಅವರ ಮೊಬೈಲ್ ಸಂಖ್ಯೆ 6362681669 ರಿಂದ ಆರೋಪಿತರ ಮೊಬೈಲ್ ಗೆ ಸಂಜೆ 04.20 ಕ್ಕೆ ಪೋನ್ ಮಾಡಿದಾಗ , ಇನ್ನು ಅರ್ಧ ಗಂಟೆಯಲ್ಲಿ ಡಿಪೋ ಬಳಿ ಬರುವುದಾಗಿ ತಿಳಿಸಿರುತ್ತಾರೆ.

12. ನಂತರ ಸಂಜೆ 04.30 ಗಂಟೆಗೆ ನಾವೆಲ್ಲರೂ **KSRTC** , ಗ್ರಾಮಾಂತರ ಘಟಕ-2, ಬನ್ನಿಮಂಟಪದ ಬಳಿ ಹೋಗಿ , ಅಲ್ಲಲ್ಲಿ ನಿಂತುಕೊಂಡಿದ್ದಾಗ , ಪಿರ್ಯದುದಾರು ಆರೋಪಿತರಿಗೆ

ಫೋನ್ ಮಾಡಿ, ಆರೋಪಿತರು ಈಗ ಹೊರಟಿದ್ದೇನೆ , ಹೋಟಿಲ್ ಭಾರ್ಗವ್ ಬಳಿ ಇರು , ಅಲ್ಲಿಗೆ ಬರುತ್ತೇನೆ ಎಂದು ತಿಳಿಸಿದರು ಎಂದು ಪಿರ್ಯದುದಾರರು ನಮಗೆ ತಿಳಿಸಿರುತ್ತಾರೆ. ನಂತರ ಪಿರ್ಯದುದಾರರು ಮತ್ತು ಪಂಚ–2 ರವರು ಹೋಟಲ್ ಭಾರ್ಗವ ಬಳಿ ನಿಂತುಕೊಂಡರು. ನಾವೆಲ್ಲರೂ ಅಲ್ಲಲ್ಲಿ ನಿಂತುಕೊಂಡಿರುತ್ತೇವೆ. ಅಲ್ಲಿಗೆ ಒಬ್ಬರು ಬೈಕ್ ನಲ್ಲಿ ಬಂದು, ಬೈಕ್ ನ್ಲಿಧ ಇಳಿದು ಪಿರ್ಯಾದುದಾರರ ಬಳಿ ಹೋದಾಗ , ಪಿರ್ಯದುದಾರರು ಅವರನ್ನು ಹೋಟ್ಲ್ ಗೆ ಕರೆದುಕೊಂಡು ಹೋದರು . ಜೊತೆಗೆ ಪಂಚ–2 ರವರು ಕೂಡ ಅವರ ಹಿಂದಿಯೇ ಹೋಗಿ ಹೋಟಲ್ ಬಾಗಿಲ ಬಳಿ ನಿಂಡಿಕೊಂಡಿದ್ದನ್ನು, ನಾವು ನೋಡುತ್ತಿದೇವು. ನಂತರ ಸ್ವಲ್ವ ಸಮಯದಲ್ಲಿ ಪಿರ್ಯದಿಯವರು ಹೊರಗಡೆ ಬರುತ್ತಿದಂತೆ ಪಂಚ–2 ರವರು ಸಹ ಅವರನ್ನು ಹಿಂಬಾಲಿಸಿಕೊಂಡು ಬಂದಿದ್ದು, ಪಿರ್ಯದುದಾರರು ತಮ್ಮ ಬಲಗೈ ನಿಂದ ತಲೆ ಸವರಿಕೊಳ್ಳುವ ಮೂಲಕ ಸೂಚನೆ ನೀಡಿದ್ದು , ಆಗ ಸಮಯ ಸುಮಾರು ಸಂಜೆ 05.10 ಆಗಿತ್ತು. ನಾವೆಲ್ಲರೂ ಪಿರ್ಯದಿ ಮತ್ತು ಪಂಚ–2 ರವರು ಇದ್ದ ಸ್ತಳಕ್ಕೆ ಹೋಗಿ, ಏನಾಯಿತು ಎಂದು ಕೇಳಲಾಗಿ , ಆರೋಪಿತರಿಗೆ ದೂಡ್ಡು ಕೊಟ್ಟಿರುವುದಾಗಿ , ಅದನ್ನು ಪಡೆದು ಅವರು ಒಂದು ಪೇಪರ್ ನಲ್ಲಿ ಸುತ್ತಿ, ಪ್ಯಾಂಟ್ ನ ಎಡ ಜೇಬಿಗೆ ಹಾಕಿಕೊಂಡರು. ತಾನೇ ಹೋಟೇಲ್ ನಿಂದ ಹೊರಗೆ ಬರುತ್ತಿದ್ದ ಒಬ್ಬರನ್ನು ತೋರಿಸಿ , ಇವರೇ ಮಂಜುನಾಥ್ , ಅಕೌಂಟ್ ಆಪೀಸರ್ ಎಂದು ತಿಳಿಸಿರುತ್ತಾರೆ. ಅದರಂತೆ ನಮ್ಮ ಸಿಬ್ಬಂದಿ ಗಳಾದ ಚೇತನ್ ಮತ್ತು ಯೋಗಿಶ್ ರವರು, ಮಂಜುನಾಥ್ ರವರ ಕ್ರಮವಾಗಿ ಬಲ ಮತ್ತು ಎಡಗೈ ನ್ನು ಹಿಡಿದುಕೊಂಡರು. ಸದರಿ ಸ್ತಳದಲ್ಲಿ ನಡಾವಳಿಯನ್ನು ಜರುಗಿಸಲು, ಅನುಕೂಲ ಇಲ್ಲದರಿಂದ, ಪಕ್ಕದಲ್ಲಿಯೇ ಇದ್ದ ಆರೋಪಿತರು ಕರ್ತವ್ಯ ನಿರ್ವಹಿಸುವ ಕಚೇರಿ, ಕೆ ಎಸ್ ಆರ್ ಟಿ ಸಿ , ಗ್ರಾಮಾಂತರ ಘಟನ–2 ರಲ್ಲಿನ ನಗದು ಶಾಖೆಗೆ ಕರೆತರಲಾಯಿತು.

ಸಾಕ್ಷಿಯೂ ಆ ದಿನ ನೋಡಿದ ಆರೋಪಿಯನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತಾರೆ. ನಂತರ ಆರೋಪಿತರಿಗೆ ನಮ್ಮಗಳ ಪರಿಚಯನ್ನು ತಿಳಿಸಿ, ಅವರನ್ನು ವಿಚಾರಿಸಲಾಗಿ ಸದರಿಯವರು ಮಂಜುನಾಥ್ ಬಿನ್ ಪಾಪಯ್ಯ ಎಂದು, ಅವರ ವೈಯಕ್ತಿಕ ಪರಿಚಯವನ್ನು ಮತ್ತು ಅವರ ಹುದ್ದೆಯ ಬಗ್ಗೆ ತಿಳಿಸಿರುತ್ತಾರೆ. ಅಲ್ಲಿಗೆ ಘಟಕ ವ್ಯವಸ್ತಾಪಕರು ಮಹೇಶ್ ರವರನ್ನು ಬರಮಾಡಿಕೊಂಡು, ಸದರಿಯವರುಗಳಿಗೆ ಪ್ರಕರಣದ ವಿವರನ್ನು ತಿಳಿಸಿದ ಪಿರ್ಯುದುದಾರರ ಪರಿಚಯವನ್ನು ಸಹ ಮಾಡಲಾಗಿರುತ್ತದೆ.

13. ನಂತರ ಘಟನೆ ಬಗ್ಗೆ ಪಿರ್ಯದುದಾರರು ಮತ್ತು ಪಂಚ-2 ರವರನು ಕೇಳಲಾಗಿ , ಪಿರ್ಯಾದುದಾರರು, ಆರೋಪಿತರು ಬಂದಾಗ ನಮಸ್ಕಾರ ಸಾರ್ ಎಂದು ಹೇಳಿ, ಅವರು ಹೊಟೇಲ್ ಭಾರ್ಗವ್ ಗೆ ಬಂದರು. ನಂತರ ತಾನು ಇಬ್ಬರಿಗೂ ಟೀ ಯನ್ನು **order** ಮಾಡಿ ನಂತರ ತನ್ನ ಅಮಾನತ್ತಿನ ಅವಧಿಯಲ್ಲಿನ ಅರ್ಧ ಸಂಬಳವನ್ನು ನೀಡುವಂತೆ ಘಟಕಾ ವ್ಯವಸ್ತಾಪಕರಿಗೆ ಈಗಾಗಲೇ ಬರೆದುಕೊಂಡಿದ್ದ ಒಂದು ಪತ್ರವನ್ನು ಅವರಿಗೆ ನೀಡಿದಾಗ , ಅವರು ಅದನ್ನು ಟೇಬಲ್ ಮೇಲೆಯೇ ಇಟ್ಟುಕೊಂಡರು . ಅನಂತರ ತಾನು ತನ್ನ ಚೆಕ್ ಬಗ್ಗೆ ವಿಚಾರ ಮಾಡಿದಾಗ , ಅವರು 'ನಿನ್ನ ಅಕೌಂಟ್ ಗೆ ಹಾಕ್ ಬಿಡ್ತೀನಿ, ನಿನ್ನ ಅಕೌಂಟ್ ನಂಬರ್ ಇದೆ , ನಾಳೆಗೆ ಹಾಕ್ತೀನೆ' ಎಂದರು. ಅದಕ್ಕೆ ತಾನು 'ಚೆಕ್ ನ್ನು ತನಗೆ ಕೊಡ್ತೀನಿ ಎಂದಿದ್ದರಲ್ಲ ' ಎಂದು ಕೇಳಿದಾಗ 'ಅಲ್ಲೇ ಇದೆ ಒಳಗಡೆ, ನೀನು ಒಳಗಡೆ ಬರೋದಿಲ್ವಲ್ಲ, ನಿನ್ನ ಅಕೌಂಟ್ ಹಾಕ್ತೀನಿ, ಟಿಕೆಟ್ ಕೊಡು' ಎಂದು ಹೇಳಿ ಲಂಚದ ಹಣವನ್ನು ಕೊಡುವಂತೆ ಬಲಗೈನ ತೋರು ಬೆರಳು ಮತ್ತು ಹೆಬ್ಬೆರ ಮೂಲಕ ಸನ್ನೆ ಮಾಡಿದರು. ಆಗ ತಾನು ತನ್ನ ಬಳಿ ಇದ್ದ ಫಿನಾಪ್ತಲಿನ್ ಲೇಪಿತ ಲಂಚದ ಹಣವನ್ನು ಅವರಿಗೆ ನೀಡಿದಾಗ ಅವರು ಅದನ್ನು ಬಲಗೈ ಮೂಲಕ ಪಡೆದು, ಎರಡು ಕೈಗಳಿಗಂದ ಹಿಡಿದುಕೊಂಡು

ಅನಂತರ ಟೇಬಲ್ ಮೇಲೆ ಇದ್ದ ತಾನು ನೀಡಿದ ಪತ್ರದ ಒಳಕ್ಕೆ ಹಣವನ್ನು ಹಾಕಿ ಅದನ್ನು ಸುತ್ತಿ, ಅವರು ಧರಿಸಿದ್ದ ಪ್ಯಾಂಟ್ ನ ಎಡಭಾಗದ ಜೇಬಿಗೆ ಹಾಕಿಕೊಂಡರು. ನಂತರ ತಾನು 'ಟಿಕೆಟ್ ಗಾಡಿಯಲ್ಲಿದೆ. ಟೀ ಕುಡಿತಿರಿ, ಗಾಡಿಯಲ್ಲಿ ಎತ್ಕೊಂಡು ಬರ್ತೀನಿ ಎಂದು ಹೇಳಿ' ಹೋಟೆಲ್ ನಿಂದ ಹೊರಗಡೆ ಬಂದು ನಮಗೆ ಸಿಗ್ನಲ್ ನೀಡಿರುವುದಾಗಿ ಮತ್ತು ಎಲ್ಲಾ ಸಂಭಾಷಣೆಯನ್ನು ನೀವು ನೀಡಿದ ವಾಯ್ಸ್ ರೆಕಾರ್ಡ್ ನಲ್ಲಿ ರೆಕಾರ್ಡ್ ಮಾಡಿರುವುದಾಗಿ ತಿಳಿಸಿರುತ್ತಾರೆ. ಎಲ್ಲಾ ವಿವರಗಳನ್ನು ನೀಡಿ ವಾಯ್ಸ್ ರೆಕಾರ್ಡ್ ಗಳನ್ನು ನಮಗೆ ಹಸ್ತಾಂತರಿಸಿರುತ್ತಾರೆ.

14. ನಂತರ ಪಂಚ-2 ರವರು ಆರೋಪಿತರು ಪಿರ್ಯದಿದಾರರ ಬಳಿ ಮಾತನಾಡುತ್ತಿದ್ದು , ಆರೋಪಿತರು ನೀಡಿದ ಲಂಚದ ಹಣವನ್ನು ಪಡೆದುಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ.

15. ನಂತರ ಠಾಣಾ ಸಿಬ್ಬಂದಿರವರಿಂದ 3 ಪ್ಲಾಸ್ಟಿಕ್ ಗ್ಲಾಸ್ ಗಳನ್ನು 3 ಪ್ಲಾಸ್ಟಿಕ್ ಬಾಟಲ್ ಗಳನ್ನು ನೀರಿನಿಂದ ಶುದ್ದಿಕರಿಸಿ , 3 ಪ್ಲಾಸ್ಟಿಕ್ ಲೋಟಗಳಿಗೆ ಡಿಸ್ಟಿಲ್ಡ್ ವಾಟರ್ ನ್ನು ಹಾಕಿ , ಅದರಲ್ಲಿ **sodium carbonate** ಪುಡಿಯನುನ ಹಾಕಿ , ದ್ರಾವಣವನ್ನು ಪ್ರತ್ಯೇಕವಾಗಿ ತಯಾರಿಸಿ , ಬಣ್ಣರಹಿತವಾಗಿದ್ದ 3 ಲೋಟಗಳಲ್ಲಿದ್ದ ದ್ರಾವಣಗಳಲ್ಲಿ ಮಾದರಿಗಾಗಿ ಸ್ವಲ್ಪ ದ್ರಾವಣವನ್ನು ಒಂದು ಪ್ಲಾಸ್ಟಿಕ್ ಬಾಟಲಿಗೆ ಹಾಕಿ, ಅದನ್ನು **I** ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ **Article**-6 ಎಂದು ಗುರುತಿಸಲಾಗಿರುತ್ತದೆ. ಸದರಿ ಬಾಟಲಿನ ಮೇಲೆ, ಪ್ರಕರಣದ ವಿವರ , ದ್ರಾವಣದ ವಿವರ, ಒಂದು ಲೇಬಲ್ ತಯಾರಿಸಿ , ಪಂಚರು ಮತ್ತು ನಾವು ಸಹಿ ಹಾಕಿರುತ್ತೇವೆ. ಸದರಿ ವಸ್ತುವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ಈಗ ನೋಡಿ ಗುರುತಿಸಿದ್ದು , ಅದನ್ನು ಎಂಒ-13 ಎಂದು ಗುರುತಿಸಲಾಯಿತು.

16. ಬಳಿಕ ಲೋಟದಲ್ಲಿ ಇದ್ದ ಬಣ್ಣ ರಹಿತ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಆರೋಪಿತರ ಬಲಗೈ ಬೆರಳುಗಳನ್ನು ಅದ್ದಿಸಿ, ತೊಳೆಸಲಾಗಿ, ದ್ರಾವಣವು ಪಿಂಕ್ ಬಣ್ಣಕ್ಕೆ ಬದಲಾಗಿರುತ್ತದೆ. ದ್ರಾವಣವನ್ನು ಒಂದು ಪ್ಲಾಸ್ಟಿಕ್ ಬಾಟಲಿಗೆ ಹಾಕಿ, ಅದನ್ನು **I** ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ **Article**–7 ಎಂದು ಗುರುತಿಸಲಾಗಿರುತ್ತದೆ. ಸದರಿ ಬಾಟಲಿನ ಮೇಲೆ, ಪ್ರಕರಣದ ವಿವರ , ದ್ರಾವಣದ ವಿವರ, ಒಂದು ಲೇಬಲ್ ತಯಾರಿಸಿ , ಪಂಚರು ಮತ್ತು ನಾವು ಸಹಿ ಹಾಕಿರುತ್ತೇವೆ. ಸದರಿ ವಸ್ತುವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ಈಗ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂಒ–4 ಎಂದು ಗುರುತಿಸಲಾಗಿರುತ್ತದೆ. ನಂತರ ಆರೋಪಿತರ ಎಡಗೈ ಬೆರಳುಗಳನ್ನು ಅದ್ದಿಸಿ, ತೊಳೆಸಲಾಗಿ, ದ್ರಾವಣವು ಪಿಂಕ್ ಬಣ್ಣಕ್ಕೆ ಬದಲಾಗಿರುತ್ತದೆ. ದ್ರಾವಣವನ್ನು ಒಂದು ಪ್ಲಾಸ್ಟಿಕ್ ಬಾಟಲಿಗೆ ಹಾಕಿ, ಅದನ್ನು **I** ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ **Article**–8 ಎಂದು ಗುರುತಿಸಲಾಗಿರುತ್ತದೆ. ಸದರಿ ಬಾಟಲಿನ ಮೇಲೆ, ಪ್ರಕರಣದ ವಿವರ , ದ್ರಾವಣದ ವಿವರ, ಒಂದು ಲೇಬಲ್ ತಯಾರಿಸಿ , ಪಂಚರು ಮತ್ತು ನಾವು ಸಹಿ ಹಾಕಿರುತ್ತೇವೆ. ಸದರಿ ವಸ್ತುವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ಈಗ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂಒ–5 ಎಂದು ಗುರುತಿಸಲಾಗಿರುತ್ತದೆ. ನಂತರ ಆರೋಪಿತರಿಗೆ ಲಂಚದ ಹಣವನ್ನು ಹಾಜರುಪಡಿಸುವಂತೆ ಕೇಳಲಾಗಿ, ಅವರು ತಾವು ಧರಿಸಿದ್ದ ಪ್ಯಾಂಟಿನ ಎಡ ಜೇಬಿನಿಂದ ಒಂದು ಪೇಪರ್ ನಲ್ಲಿ ಸುತ್ತಿದ ನೋಟುಗಳನ್ನು ಪೇಪರ್ ಸಮೇತ ಹೊರಗೆ ತೆಗೆದು ಹಾಜರುಪಡಿಸಿರುತ್ತಾರೆ. ಸದರಿ ಹಣವನ್ನು ಪಂಚ–2 ರವರಿಗೆ ಕೊಡಿಸಿ , ಪಂಚ–1 ರವರ ಬಳಿ ಇದ್ದ ನೋಟಿನ ವಿವರದ ಹಾಳೆಯೊಂದಿಗೆ ಪರಿಶೀಲಿಸುವಂತೆ ಸೂಚಿಸಲಾಗಿ, ಅವರು ನೋಟಿನ ವಿವರಗಳನ್ನು ಮತ್ತು ನೋಟನ್ನು ತಾಳೆ ಮಾಡಿ ನೋಡಿರುತ್ತಾರೆ. ಅವುಗಳು

ತಾಳೆಯಾಗಿರುತ್ತವೆ. ಸದರಿ ವಿವರಗಳನ್ನು ಪಂಚನಾಮೆಯಲ್ಲಿ ನಮೂದಿಸಲಾಗಿರುತ್ತದೆ. ಮೇಲ್ಕಂಡ ನೋಟುಗಳನ್ನು ಒಂದು ಕವರ್ ನಲ್ಲಿ ಹಾಕಿ, **I** ಎಂಬ ಅಕ್ಷರದಿಂದ ಸೀಲ್ ಮಾಡಿ, ಅದಕ್ಕೆ **Article**-9 ಎಂದು ಗುರುತಿಸಲಾಗಿರುತ್ತದೆ. ಒಂದು ಲೇಬಲ್ ತಯಾರಿಸಿ , ಪಂಚರು ಮತ್ತು ನಾವು ಸಹಿ ಹಾಕಿರುತ್ತೇವೆ. ಸದರಿ ಕವರ್ ನ್ನು ನೋಡಿದರೆ ಗುರುತಿಸಬಲ್ಲೆ. ಅದನ್ನು ಈಗಾಗಲೇ ಎಂಒ-6 ಎಂದು ಗುರುತಿಸಲಾಗಿರುತ್ತದೆ.

17. ನಂತರ ಆರೋಪಿತರು ಲಂಚದ ಹಣವನ್ನು ಇಟ್ಟುಕೊಂಡಿದ್ದ , ಪಿರ್ಯದುದಾರರು ಬರೆದುಕೊಟ್ಟಿದ್ದ ಪತ್ರವನ್ನು ಪರಿಶೀಲಿಸಲಾಗಿ , ತನ್ನ ಅಮಾನತ್ತು ಅವಧಿಯಲ್ಲಿಯ ತನ್ನ ವೇತನದ ಬಗ್ಗೆ ಅವರ ಮೇಲಾದಿಧಕಾರಿಯವರಿಗೆ ಬರೆದ ಪತ್ರವಾಗಿರುತ್ತದೆ. ನಂತರ ಸದರಿ ಪತ್ರವನ್ನು ನಮ್ಮ ಠಾಣಾ ಸಿಬ್ಬಂದಿಯವರಿಂದ ಒಂದು ಹತ್ತಿಯಿಂದ ಸದರಿ ದಾಖಲೆಯ ಮೇಲೆ ಒರೆಸಿ , ಸದರಿ ಹತ್ತಿಯನ್ನು ಈಗಾಗಲೇ ತಯಾರಿಸಿದ **Sodium carbonate** ದ್ರಾವಣದಲ್ಲಿ ಅದ್ದಿಸಲಾಗಿ, ಸದರಿ ದ್ರಾವಣವು ಪಿಂಕ್ ಬಣ್ಣಕ್ಕೆ ತಿರುಗಿರುತ್ತದೆ. ದ್ರಾವಣವನ್ನು ಒಂದು ಪ್ಲಾಸ್ಟಿಕ್ ಬಾಟಲಿಗೆ ಹಾಕಿ, ಅದನ್ನು **I** ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ **Article**-10 ಎಂದು ಗುರುತಿಸಲಾಗಿರುತ್ತದೆ. ಸದರಿ ಬಾಟಲಿನ ಮೇಲೆ, ಪ್ರಕರಣದ ವಿವರ , ದ್ರಾವಣದ ವಿವರ, ಒಂದು ಲೇಬಲ್ ತಯಾರಿಸಿ , ಪಂಚರು ಮತ್ತು ನಾವು ಸಹಿ ಹಾಕಿರುತ್ತೇವೆ. ಸದರಿ ವಸ್ತುವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ಈಗ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂಒ-9 ಎಂದು ಗುರುತಿಸಲಾಗಿರುತ್ತದೆ.

18. ನಂತರ ಪತ್ರವನು ಒರೆಸಿದ ಹತ್ತಿಯನ್ನು ಒಂದು ಕವರ್ ನಲ್ಲಿ ಹಾಕಿ, ಅದನ್ನು **I** ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ **Article**-11 ಎಂದು ಗುರುತಿಸಲಾಗಿರುತ್ತದೆ. ಸದರಿ ಕವರ್

ಮೇಲೆ, ಪ್ರಕರಣದ ವಿವರ , ದ್ರಾವಣದ ವಿವರ, ಒಂದು ಲೇಬಲ್ ತಯಾರಿಸಿ , ಪಂಚರು ಮತ್ತು ನಾವು ಸಹಿ ಹಾಕಿರುತ್ತೇವೆ. ಸದರಿ ವಸ್ತುವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ಈಗ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂಒ-10 ಎಂದು ಗುರುತಿಸಲಾಗಿರುತ್ತದೆ.

19. ನಂತರ ಸದರಿ ಲಂಚದ ಹಣವನ್ನು ಒಂದು ಪೇಪರ್ ನಲ್ಲಿ ಸುತ್ತಿ, ಆರೋಪಿತ ತನ್ನ ಪ್ಯಾಂಟ್ ಜೇಬ್ ನ ಎಡಬಾಗದಲ್ಲಿ ಇಟ್ಟುಕೊಂಡಿದ್ದರಿಂದ , ಸದರಿ ಪೇಪರ್ ನ್ನು ಒಂದು ಕವರ್ ನಲ್ಲಿ ಹಾಕಿ, ಅದನ್ನು I ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ **Article**-12 ಎಂದು ಗುರುತಿಸಲಾಗಿರುತ್ತದೆ. ಸದರಿ ಕವರ್ ಮೇಲೆ, ಪ್ರಕರಣದ ವಿವರ , ಒಂದು ಲೇಬಲ್ ತಯಾರಿಸಿ , ಪಂಚರು ಮತ್ತು ನಾವು ಸಹಿ ಹಾಕಿರುತ್ತೇವೆ. ಸದರಿ ವಸ್ತುವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ಈಗ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂಒ-11 ಎಂದು ಗುರುತಿಸಲಾಗಿರುತ್ತದೆ.

20. ನಂತರ ಆರೋಪಿತರು ಲಂಚದ ಹಣವನ್ನು ಪೇಪರ್ ನಲ್ಲಿ ಸುತ್ತಿ , ತಾವು ಧರಿಸಿದ ಪ್ಯಾಂಟ್ ನ ಎಡಭಾಗದಲ್ಲಿ ಇಟ್ಟುಕೊಂಡಿದ್ದರಿಂದ, ಪ್ಯಾಂಟ್ ನ್ನು ದ್ರಾವಣದಲ್ಲಿ ಅದ್ದಿಸಿ ತೊಳೆಸಬೇಕಾದ್ದರಿಂದ , ಒಂದು ಪ್ಲಾಸ್ಟಿಕ್ ಲೋಟದಲ್ಲಿ **Sodium carbonate** ದ್ರಾವಣ ತಯಾರಿಸಿ ಮಾದರಿಗಾಗಿ ಸ್ವಲ್ಪ ತೆಗೆದುಕೊಂಡು, ಅದನ್ನು ಒಂದು ಪ್ಲಾಸ್ಟಿಕ್ ಬಾಟಲ್ ಗೆ ಹಾಕಿ, ಅದನ್ನು I ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ **Article**-13 ಎಂದು ಗುರುತಿಸಲಾಗಿರುತ್ತದೆ. ಸದರಿ ಬಾಟಲಿನ ಮೇಲೆ, ಪ್ರಕರಣದ ವಿವರ , ದ್ರಾವಣದ ವಿವರ, ಒಂದು ಲೇಬಲ್ ತಯಾರಿಸಿ , ಪಂಚರು ಮತ್ತು ನಾವು ಸಹಿ ಹಾಕಿರುತ್ತೇವೆ. ಸದರಿ ವಸ್ತುವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ಈಗ ನೋಡಿ ಗುರುತಿಸಿದ್ದು, ಅದನ್ನು ಎಂಒ-14 ಎಂದು ಗುರುತಿಸಲಾಯಿತು .

21. ನಂತರ ಆರೋಪಿತರು ಧರಿಸಿದ್ದ ಪ್ಯಾಂಟಿನ ಎಡ ಗೈ ನ್ನು ಅದ್ದಿಸಿ ತೊಳೆಸಬೇಕಾದ್ದರಿಂದ, ಒಂದು ಪ್ಯಾಂಟಿನ ವ್ಯವಸ್ತೆ ಮಾಡಿಸಿ, ನಂತರ ಆರೋತಪಿರ ಪ್ಯಾಂಟ್ ನ ಎಡಭಾಗದ ಜೇಬಿನ್ ಒಳಬುದಿಯನ್ನು **sodium carbonate** ಧ್ರಾವಣದಲ್ಲ ಅದ್ದಿಸಲಾಗಿ, ಸದರಿ ಧ್ರಾವಣವೂ ಯವೂದೇ ಬಣಕ್ಕೆ ಬದಲಾಗಿರುವುದಿಲ್ಲ. ಸದರಿ ಧ್ರಾವಣವನ್ನು ಒಂದು ಪ್ಲಾಸ್ಟಿಕ್ ಬಾಟಲಿಗೆ ಹಾಕಿ, ಅದನ್ನು **I** ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ **Article**-14 ಎಂದು ಗುರುತಿಸಲಾಗಿರುತ್ತದೆ. ಸದರಿ ಬಾಟಲಿನ ಮೇಲೆ, ಪ್ರಕರಣದ ವಿವರ , ಧ್ರಾವಣದ ವಿವರ, ಒಂದು ಲೇಬಲ್ ತಯಾರಿಸಿ , ಪಂಚರು ಮತ್ತು ನಾವು ಸಹಿ ಹಾಕಿರುತ್ತೇವೆ. ಸದರಿ ವಸ್ತುವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ಈಗ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂಒ-7 ಎಂದು ಗುರುತಿಸಲಾಗಿರುತ್ತದೆ.

22. ನಂತರ ಆರೋಪಿತರು ಧರಿಸಿದ್ದ ಪ್ಯಾಂಟ್ ನ್ನು ಒಂದು ಕವರ್ ನಲ್ಲಿ ಹಾಕಿ , ಅದನ್ನು **I** ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ **Article**-15 ಎಂದು ಗುರುತಿಸಲಾಗಿರುತ್ತದೆ. ಸದರಿ ಕವರ್ ಮೇಲೆ, ಪ್ರಕರಣದ ವಿವರ , ಒಂದು ಲೇಬಲ್ ತಯಾರಿಸಿ , ಪಂಚರು ಮತ್ತು ನಾವು ಸಹಿ ಹಾಕಿರುತ್ತೇವೆ. ಸದರಿ ವಸ್ತುವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ಈಗ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂಒ-12 ಎಂದು ಗುರುತಿಸಲಾಗಿರುತ್ತದೆ.

23. ನಂತರ ಮೇಲ್ಕಂಡಂತೆ ಧ್ರಾವಣ ತಯಾರಿಸಲು ಉಪಯೋಗಿಸಿದ **sodium carbonate** ಪೌಡರ್ ನ್ನು ಮಾದರಿಗಾಗಿ ಸ್ವಲ್ಪ ತೆಗೆದು ಒಂದು ಪೊಟ್ಟಣ ಕಟ್ಟಿ, ಒಂದು ಕವರ್ ಒಳಗಡೆ ಹಾಕಿ, ಅದನ್ನು **I** ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ **Article**-16 ಎಂದು ಗುರುತಿಸಲಾಗಿರುತ್ತದೆ. ಸದರಿ ಕವರ್ ಮೇಲೆ, ಪ್ರಕರಣದ ವಿವರ , ಒಂದು ಲೇಬಲ್ ತಯಾರಿಸಿ ,

ಪಂಚರು ಮತ್ತು ನಾವು ಸಹಿ ಹಾಕಿರುತ್ತೇವೆ. ಸದರಿ ವಸ್ತುವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ಈಗ ನೋಡಿ ಗುರುತಿಸಿದ್ದು, ಅದನ್ನು ಎಂಒ– 15 ಎಂದು ಗುರುತಿಸಲಾಯಿತು.

24. ನಂತರ ಲಂಚದ ಹಣವನ್ನು ಪಡೆದುಕೊಳ್ಳುವ ಸಮಯದಲ್ಲಿ ಪಿರ್ಯದುದಾರರು ಡಿಜಿಟಲ್ ವಾಯ್ಸ್ ರೆಕಾರ್ಡ್ ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದನು, ನಮ್ಮ ಸಿಬ್ಬಂದಿಯವರಿಂದ , ವಾಯ್ಸ್ ರೆಕಾರ್ಡ್ ನ್ನು ಒಂದು ಲ್ಯಾಪ್ ಟಾಪ್ ಗೆ ಹಾಕಿ ಕೇಳಲಾಗಿ , ಎಂದು ಫೈಲ್ ಇದ್ದು , ಅದರಲ್ಲಿ ಒಟ್ಟು 16 ನಿಮಿಷಗಳ ಸಂಭಾಷಣೆ ಇದ್ದು, ಮೊದಲಿಗೆ ವಾಹನಗಳ ಶಬ್ದ ಮತ್ತು ಸಾರ್ವಜನಿಕರ ಶಬ್ದ ಇದ್ದು , ನಂತರ 12.41 ನಿಮಿಷದಿಂದ ಮುಂದಿನ ಸಂಬಾಷಣೆಯನ್ನು ಕೇಳಿ, ಅದನ್ನು ಲಿಖಿತ ರೂಪದಲ್ಲಿ, ಮಹಜರ್ ನಲ್ಲಿ ನಮೂದಿಸಲಾಗಿರುತ್ತದೆ. ಸದರಿ ಸಂಭಾಷಣೆಯ ಪೈಕಿ ಪಿರ್ಯದುದಾರರು ಸಂಭಾಷಣೆಯಲ್ಲಿ ತನ್ನ ಧ್ವನಿಯನ್ನು ಗುರುತಿಸಿದ್ದು, ಸಂಭಾಷಣೆಯಲ್ಲಿ ಆರೋಪಿತರ ಧ್ವನಿಯನ್ನು, ಹಾಜರಿದ್ದ ಚಾಸಾ.5 ರವರು ಗುರುತಿಸಿರುತ್ತಾರೆ. ಸದರಿ ಸಂಭಾಷಣೆಯನ್ನು ಠಾಣಾ ಸಿಬ್ಬಂದಿಯವರಿಂದ 3 ಸಿಡಿಗಳಿಗೆ ಕಾಪಿ ಮಾಡಿ, ಒಂದು ಸಿಡಿಯನ್ನು ಆರೋಪಿರಿಗೆ ನೀಡಿ ಉಳಿದ 2 ಸಿಡಿಗಳನ್ನು ಅಮಾನತ್ತು ಪಡಿಸಿಕೊಳ್ಳುವ ಸಂಬಂಧ ಸಿಡಿ ಮೇಲರ್ ಗಳಿಗೆ ಪ್ರತ್ಯೇಕವಾಗಿ ಹಾಕಿ ಅವುಗಳ ಮೇಲೆ ಲೇಬಲ್ ಅಂಟಿಸಿ, ಪ್ರಕರಣದ ವಿವರ ಮತ್ತು ಸಂಭಾಷಣೆಯ ವಿವವರವನ್ನು ನಮೂದಿಸಿ, ಅದಕ್ಕೆ ನಾನು ಮತ್ತು ಪಂಚರು ಸಹಿ ಮಾಡಿರುತ್ತೇವೆ. ಸದರಿ ಕವರ್ ನ್ನು **I** ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ **Article**–17 ಮತ್ತು 17(ಎ) ಎಂದು ಗುರುತಿಸಲಾಯಿತು.

25. ನಂತರ ಈಗಾಗಲೇ **enterustment** ಮಹಜರ್ ಕಾಲದಲ್ಲಿ ಅಮಾನತ್ತುಪಡಿಸಿಕೊಂಡ **Article**–4 ರಲ್ಲಿರುವ ಸಂಭಾಷಣೆಯಲ್ಲಿ ಪಿರ್ಯದುದಾರರು

ಮತ್ತು ಆರೋಪಿತರು ಮಾತನಾಡಿರುವುದನ್ನು ಮತ್ತು ಇದೇ ಟ್ರಾಪ್ ಮಹಜರ್ ಕಾಲದಲ್ಲಿ ಅಮಾನತ್ತುಪಡಿಸಿಕೊಂಡ **Article**-17 ರಲ್ಲಿ ಪಿರ್ಯಾದುದಾರರ ಮತ್ತು ಆರೋಪಿತರ ಸಂಭಾಷಣೆಯಲ್ಲಿ ಮಾತಾಡಿರುವುದನ್ನು ಖಾತರಿಪಡಿಸುವ ಸಂಬಂಧ, ಮಾದರಿ ಧ್ವನಿಯನ್ನು ಪಡೆದುಕೊಂಡು, ಎಫ್ ಎಸ್ ಎಲ್ ಗೆ ಕಳುಹಿಸಬೇಕಾದ್ದರಿಂದ, ಪಿರ್ಯದುದಾರರು ಮತ್ತು ಆರೋಪಿತರ ಮಾದರಿ ಧ್ವನಿಗಳನ್ನು ಪಡೆದುಕೊಳ್ಳಲು ಅವರು ಒಪ್ಪಿಗೆಯನ್ನು ನೀಡಿದ್ದು, ಆ ಪ್ರಕಾರ **Article**-4 ಮತ್ತು 17 ರಲ್ಲಿರುವ ಸಂಭಾಷಣೆಯ ಪೈಕಿ ಪಿರ್ಯದುದಾರರು ಮಾತನಾಡಿರುವ ಸಂಬಾಷಣೆಯನ್ನು ಒಂದು ಹಾಳೆಯಲ್ಲಿ ಲಿಖಿತ ರೂಪಕ್ಕೆ ಡಿಳಿಸಿ , ಅದನುನ ಪಿರ್ಯದುದಾರರಿಗೆ ನೀಡಿ, 3 ಬಾರಿ ಪ್ರತ್ಯೇಕವಾಗಿ ಓದಿಸಿ, ವಾಯ್ಸ್ ರೆಕಾರ್ಡ ಮಾಡಿರುತ್ತೇವೆ. ಸದರಿ ಸಂಭಾಷಣೆಯನ್ನು ಲಿಖಿತ ರೂಪದಲ್ಲಿ ಮಹಜರ್ ನಲ್ಲಿ ನಮೂದಿಸಲಾಗಿರುತ್ತದೆ. ನಂತರ ಅದೇ ರೀತಿ **Article**-4 ರಲ್ಲಿ ಆರೋಪಿತರು ಮಾತನಾಡಿರುವ ಸಂಭಾಷಣೆಯನ್ನು ಲಿಖಿತ ರೂಪದಲ್ಲಿ ಬರೆಸಿಕೊಂಡು 3 ಬಾರಿ ಪ್ರತ್ಯೇಕವಾಗಿ ಓದಿಸಿ, ವಾಯ್ಸ್ ರೆಕಾರ್ಡ ಮಾಡಿರುತ್ತೇವೆ. ಸದರಿ ಸಂಭಾಷಣೆಯನ್ನು ಲಿಖಿತ ರೂಪದಲ್ಲಿ ಮಹಜರ್ ನಲ್ಲಿ ನಮೂದಿಸಲಾಗಿರುತ್ತದೆ. ಸದರಿ ಪ್ರಕ್ರಿಯೆಯನ್ನು **Article**-17 ರಲ್ಲಿಯ ಸಂಭಾಷಣೆಗೆ ಸಂಬಂದಪಟ್ಟಂತೆ ಮಾಡಲಾಗಿರುತ್ತದೆ.

26. ನಂತರ ಸದರಿ ಪಿರ್ಯದುದಾರರು ಮಾದರಿ ಧ್ವನಿಗಾಗಿ ಡಿಜಿಟಲ್ ವಾಯ್ಸ್ ರೆಕಾರ್ಡ್ ನಲ್ಲಿ ರೆಕಾರ್ಡ್ ಮಾಡಿದ ಸಂಭಾಪೆಣೆಯನ್ನು ಲ್ಯಾಪ್ ಟಾಪ್ ಗೆ ಹಾಕಿ , ಸಿಡಿಯಲ್ಲಿ ಕಾಪಿ ಮಾಡಿ , ಸದರಿ ಸಿಡಿಯ ಮೇಲರ್ ನಲ್ಲಿ ಹಾಕಿ , ಒಂದು ಕವರ್ ಗೆ ಹಾಕಿ , ಒಂದು ಲೇಬಲ್ ಅಂಟಿಸಿ, ಅದಕ್ಕೆ ನಾನು ಮತ್ತು ಪಂಚರು ಸಹಿ ಮಾಡಿರುತ್ತೇವೆ. ಸದರಿ ಕವರ್ ನ್ನು **I** ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ **Article**-18 ಎಂದು ಗುರುತಿಸಲಾಗಿರುತ್ತದೆ.

27. ನಂತರ ಸದರಿ ಆರೋಪಿತರು ಮಾದರಿ ಧ್ವನಿಗಾಗಿ ಡಿಜಿಟಲ್ ವಾಯ್ಸ್ ರೆಕಾರ್ಡ್ ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯನ್ನು ಲ್ಯಾಪ್ ಟಾಪ್ ಗೆ ಹಾಕಿ , ಸಿಡಿಯಲ್ಲಿ ಕಾಪಿ ಮಾಡಿ , ಸದರಿ ಸಿಡಿಯ ಮೇಲರ್ ನಲ್ಲಿ ಹಾಕಿ, ಒಂದು ಕವರ್ ಗೆ ಹಾಕಿ, ಒಂದು ಲೇಬಲ್ ಅಂಟಿಸಿ, ಅದಕ್ಕೆ ನಾನು ಮತ್ತು ಪಂಚರು ಸಹಿ ಮಾಡಿರುತ್ತೇವೆ. ಸದರಿ ಕವರ್ ನ್ನು I ಎಂಬ ಅಕ್ಷರದಿಂದ ಸೀಲ್ ಮಾಡಿ ಅದಕ್ಕೆ **Article**-19 ಎಂದು ಗುರುತಿಸಲಾಗಿರುತ್ತದೆ. ನಂತರ ಮೇಲ್ಕಂಡ ನಡಾವಳಿಗೆ ಉಪಯೋಗಿಸಿದ I ಎಂಬ ಸೀಲ್ ನ್ನು, 3 ಬಿಳಿ ಹಾಳೆಗಳ ಮೇಲೆ ಮಾದರಿ ಸೀಲ್ ನ್ನು ಪಡೆದು, ಪಂಚ-1 ರವಗೆ ನೀಡಿ, ಅವರ ಬಳಿ ಇಟ್ಟುಕೊಂಡು, ವಿಚಾರಣಾ ಕಾಲದಲ್ಲಿ ಹಾಜರುಪಡಿಸುವಂತೆ ಸೂಚಿಸಿರುತ್ತೇನೆ.

28. ಆನಂತರ ಆರೋಪಿತರಿಗೆ ಪ್ರಕರಣದ ಬಗ್ಗೆ ಸಮಜಾಯಿಸಿ ಏನಾದರೂ ಇದ್ದರೇ ಬರೆದುಕೊಡುವಂತೆ ತಿಳಿಸಿದ್ದು, ಅದರಂತೆ ಸದರಿಯವರು ಸಮಜಾಯಿಸಿಯನ್ನು ಆರೋಪಿತರೇ ಬರೆದುಕೊಟ್ಟಿರುತ್ತಾರೆ. ಸದರಿ ವಿಚಾರವನ್ನು ಮಹಜರ್ ನಲ್ಲಿ ನಮೂದಿಸಲಾಗಿರುತ್ತದೆ. ಸದರಿ ಸಮಾಜಾಯಿಸಿಯ ಮೇಲೆ ನಾನು ಮತ್ತು ಪಂಚರು ಸಹಿ ಹಾಕಿರುತ್ತೇವೆ. ಸಾಕ್ಷಿಯೂ ಆರೋಪಿತರು ನೀಡಿದ್ದ ಸಮಜಾಯಿಸಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.34 ಎಂದು, ಸಾಕ್ಷಿಯ ಸಹಿಯನ್ನು ನಿಪಿ.34(ಎ) ಎಂದು ಗುರುತಿಸಲಾಯಿತು. ಸದರಿ ಸಮಾಜಾಯಿಸಿಯಲ್ಲಿ ಆರೋಪಿತರು ಸಹ ಸಹಿ ಹಾಕಿರುತ್ತಾರೆ. ಸದರಿ ಸಹಿಯನ್ನು ನಿಪಿ.34(ಬಿ) ಎಂದು ಗುರುತಿಸಲಾಯಿತು.

29. ನಂತರ ಪಿರ್ಯಾದುದಾರರು ಮತ್ತು ಪಂಚ-2 ರವರಿಗೆ ಸಮಜಾಯಿಸಿಯನ್ನು ಓದಿ ತಿಳಿಸಲಾಗಿ, ಸಮಜಾಯಿಸಿ ಸುಳ್ಳು ಎಂದು ಪಿರ್ಯಾದುದಾರರು ತಿಳಿಸಿದ್ದು , ಪಂಚ-2 ರವರು

ಆರೋಪಿತರು ಪಿರ್ಯಾದುದಾರರ ಬಳಿ ಮಾತನಾಡಿ ಹಣವನ್ನು ಪಡೆದುಕೊಂಡಿದ್ದನ್ನು ನೋಡಿರುವುದಾಗಿ ತಿಳಿಸಿರುತ್ತಾರೆ. ನಂತರ ಆರೋಪಿಯನ್ನು ದಸ್ತಗಿರಿ ಮಾಡಿ ಚಾಸಾ.5 ಮತ್ತು ಆರೋಪಿತರಿಗೆ ತಿಳುವಳಿಕೆ ಪತ್ರವನ್ನು ಜಾರಿ ಮಾಡಿರುತ್ತೇನೆ. ಸಾಕ್ಷಿಯೂ ಚಾಸಾ.5 ರವರಿಗೆ ನೀಡಿದ ದಸ್ತಗಿರಿ ತಿಳುವಳಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.26 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ.26(ಬಿ) ಎಂದು ಗುರುತಿಸಲಾಯಿತು.

30. ನಂತರ ಪಿರ್ಯುದುದಾರರಿಗೆ ಸಂಬಂಧಿಸಿ ದಾಖಲಾತಿಗಳನ್ನು ಹಾಜರುಪಡಿಸುವಂತೆ ಆರೋಪಿತರಿಗೆ ಸೂಚಿಸಿದಾಗ, ಆರೋಪಿ ತನ್ನ ಬಳಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಸ್ಥಳದಲ್ಲಿದ್ದ ಚಾಸಾ.5 ರವರು ಪಿರ್ಯದುದಾರರಿಗೆ ಸಂಬಂಧಿಸಿದ ದಾಖಲಾತಿಗಳು ಡಿವಿಷನ್ ಆಪೀಸ್ ನಲ್ಲಿ ಇರುವುದಾಗಿ, ಈ ಕಚೇರಿಯಲ್ಲಿ ಪಿರ್ಯದುದಾರರಿಗೆ ಮಂಜೂರಾಗಿರುವ ಚೆಕ್ ಇದೆ ಎಂದು ತಿಳಿಸಿ, ಕಚೇರಿಯ ಸಿಬ್ಬಂದಿಯಾದ ಚಾಸಾ.6 ರವರ ಮೂಲಕ ಚೆಕ್ ಹಾಜರುಪಡಿಸಿರುತ್ತಾರೆ ಮತ್ತು ಕಚೇರಿಯ ಹಾಜರಾತಿ ವಹಿಯನ್ನು ಸಹ ಹಾಜರುಪಡಿಸಿರುತ್ತಾರೆ. ಸದರಿ ಚೆಕ್ ನ್ನು ನೋಡಲಾಗಿ ಅದು **SBI Bank** ನ ಖಾತೆ ನಂಬರ್ 64022282427 ಇಲ್ಲಿನ ಚೆಕ್ ನಂಬರ್ 679986 ಆಗಿದ್ದು, ಅಶೋಕ ರಸ್ತೆಯ ಶಾಖೆಯದಾಗಿರುತ್ತದೆ. ನಂತರ ಹಾಜರಾತಿ ವಹಿ ಮೈ.ಗ್ರಾ.ವಿ. 2 ನೇ ಘಟಕ ಜುಲೈ 2019 ಎಂದು ಇದ್ದು, ಆರೋಪಿತರ ಹೆಸರು 8 ನೇ ಕ್ರಮ ಸಂಖ್ಯೆಯಲ್ಲಿ ಇರುತ್ತದೆ. ಈ ದಿನ ಸಿಟಿ ಬಸ್ ಸ್ಟಾಂಡ್ ಇಲ್ಲಿಗೆ ಕರ್ತವ್ಯ ಕ್ಕೆ ನಿಯೋಜನೆ ಮಾಡಿರುವುದಾಗಿ ನಮೂದಿಸಲಾಗಿರುತ್ತದೆ. ಮೇಲ್ಕಂಡ ದಾಖಲಾತಿಗಳನ್ನು ನಕಲು ಪ್ರತಿ ಮಾಡಿಸಿ, ಸ್ಥಳದಲ್ಲಿ ಇದ್ದ ಚಾಸಾ.5 ರವರಿಂದ ದೃಡೀಕರಿಸಿಕೊಂಡು, ಮೂಲ ದಾಖಲಾತಿಗಳನ್ನು ಚಾಸಾ.5 ರವರಿಗೆ ನೀಡಿ ವಿಚಾರಣಾ ಕಾಲದಲ್ಲಿ ಹಾಜರುಪಡಿಸುವಂತೆ ಸೂಚಿಸಿರುತ್ತೇನೆ. ಸದರಿ ದಾಖಲೆಗಳ

ಮೇಲೆ ನಾವು ಮತ್ತು ಪಂಚರು ಸಹಿ ಹಾಕಿರುತ್ತೇವೆ . ಸಾಕ್ಷಿಯೂ ದೃಡೀಕರಿಸಿದ ಚೆಕ್‌ನ ಪ್ರತಿಯನ್ನು ಮತ್ತು ಹಾಜರಾತಿ ವಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ.13 ಮತ್ತು 14 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.13(ಸಿ) ಮತ್ತು 14(ಬಿ) ಎಂದು ಗುರುತಿಸಲಾಯಿತು.

31. ನಂತರ ಠಾಣಾ ಸಿಬ್ಬಂದಿಯವರಿಂದ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ ಹಾಗೂ ಮೇಲ್ಕಂಡ ಮಹಜರ್ ನಡಾವಳಿಯ ಕಾಲದಲ್ಲಿ ಎಲ್ಲವನ್ನು ಚಾಸಾ.21 ರವರಿಂದ ಪೋಟೋವನ್ನು ತೆಗೆಸಲಾಗಿರುತ್ತದೆ. ಸದರಿ ಪೋಟೋಗಳನ್ನು ಸಾಕ್ಷಿಯ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ.15 ರಿಂದ 23 ಎಂದು ಗುರುತಿಸಲಾಗಿರುತ್ತದೆ. ಪ್ರತಿ ಪೋಟೋವಿನ ಹಾಳೆಯ ಮೇಲೆ ನನ್ನ ಸಹಿ ಇರುತ್ತದೆ. ಸದರಿ ನಡಾವಳಿಯನ್ನು ದಿ.10.07.2019 ರಂದು **KSRTC** ಗ್ರಾಮಾಂತರ ಘಟಕ-2, ಬನ್ನಿ ಮಂಟಪ , ಮೈಸೂರು ಇಲ್ಲಿನ ನಗದು ಶಾಖೆಯಲ್ಲಿ ಸಂಜೆ 05.40-09.45 ರವರೆಗೆ ಟ್ರಾಪ್ ಮಹಜರ್ ನ್ನು ಜರುಗಿಸಲಾಗಿರುತ್ತದೆ. ಸದರಿ ಮಹಜರ್ ನ್ನು ಠಾಣಾ ಸಿಬ್ಬಂದಿಯವರಿಂದ ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿಸಲಾಗಿರುತ್ತದೆ. ಸದರಿ ಮಹಜರ್ ಗೆ ನಾನು , ಆರೋಪಿ , ಪಂಚರು , ಚಾಸಾ.5 ಮತ್ತು ಜೂನಿಯರ್ ಅಸಿಸ್ಟೆಂಟ್ ರವರಗಳು ಸಹಿಗಳನ್ನು ಮಾಡಿರುತ್ತೇವೆ. ಸಾಕ್ಷಿಯೂ ಟ್ರಾಪ್ ಮಹಜರ್ ನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.24 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.24(ಎಫ್) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಅನಿಯಂತ್ರಿತ ವಿದ್ಯುಚ್ಛಕ್ತಿ ಸಂಪರ್ಕ ಇರುತ್ತದೆ.

32. ನಂತರ ಕಚೇರಿಗೆ ವಾಪಾಸ್ ಬಂದು ಸದರಿ ಮಹಜರ್ ಕಾಲದಲ್ಲಿ ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 10/19 ಎಂದು ನೊಂದಾಯಿಸಿ, **enterustment** ಮಹಜರ್, ಟ್ರಾಪ್ ಮಹಜರ್, 2 ಮಾಲುಪಟ್ಟಿಗಳನ್ನು ಮೂಲ ದಾಖಲೆಗಳೊಂದಿಗೆ ಮಾನ್ಯ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯೂ ಠಾಣಾ ಮಾಲುಪಟ್ಟಿ ಸಂಖ್ಯೆ 10/19 ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.35 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.35(ಎ) ಎಂದು ಗುರುತಿಸಲಾಯಿತು.

33. ನಂತರ ಘನ ನ್ಯಾಯಾಲಯಕ್ಕೆ ಟ್ರಾಪ್ ಸಫಲವಾದ್ದರಿಂದ ಸೀಲು ಮಾಡಿರುವ ಲಕೋಟೆಯನ್ನು ತೆರೆಯುವ ಬಗ್ಗೆ ನಿವೇದಿನಾ ಪತ್ರವನ್ನು ಸಲ್ಲಿಸಿಕೊಂಡಿರುತ್ತೇನೆ. ಸಾಕ್ಷಿಯೂ ದಿ.10.07.2019 ರ ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.36 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.36(ಎ) ಎಂದು ಗುರುತಿಸಲಾಯಿತು.

34. ನಂತರ ಆರೋಪಿತರನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿ ಬಂಧನ ಪತ್ರದೊಂದಿಗೆ ಘನ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

35. ಪಂಚ-1 ರವರಿಗೆ ಮೆಟಲ್ ಸೀಲ್ ನೀಡಿದರ ಬಗ್ಗೆ ಸ್ವೀಕೃತಿಯನ್ನು ಪಠೆದುಕೊಂಡಿರುತ್ತೇನೆ ಸಾಕ್ಷಿಯೂ ಸ್ವೀಕೃತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.37 (ಪುಟ ಸಂಖ್ಯೆ 52) ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.37(ಎ) ಎಂದು ಗುರುತಿಸಲಾಯಿತು.

36. ದಿ.11.07.2019 ರಂದು ಪ್ರಕರಣದ ಪಿರ್ಯಾದುದಾರರು, ಚಾಸಾ.1, 2, 3, 5, ಮತ್ತು 6, ಚಾಸಾ.18, 19, 20, 21, 22, 23 ರವರುಗಳ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

37. ದಿ.12.07.2019 ರಂದು ಆರೋಪಿತರ ಸೇವಾ ವಿವರಗಳನ್ನು ನೀಡುವಂತೆ ಚಾಸಾ.5 ರವರಿಗೆ ಪತ್ರ ಬರೆದಿರುತ್ತೇನೆ. ಅದೇ ದಿನ ಚಾಸಾ.5 ರವರು ಆರೋಪಿತರ ಸೇವಾ ವಿವರಗಳನ್ನು ನೀಡಿರುತ್ತಾರೆ. ಸಾಕ್ಷಿಯೂ ದಿ.12.07.2019 ರ ಕೋರಿಕೆ ಪತ್ರ ಮತ್ತು ದಾಖಲಾತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ.38 (ಪುಟ ಸಂಖ್ಯೆ 75 ರಿಂದ 78) ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.38(ಎ) ಎಂದು ಗುರುತಿಸಲಾಯಿತು.

38. ನಂತರ ದಿ.15.07.2019 ರಂದು ಪಿರ್ಯಾದುದಾರರು ಮತ್ತು ಆರೋಪಿತರಿಗೆ ಸಂಬಂಧಿಸಿದ ಮೊಬೈಲ್ ಸಂಖ್ಯೆಗಳ **CDR**, **CAF** ಮತ್ತು 65(ಬಿ) ಪ್ರಮಾಣ ಪತ್ರಗಳನ್ನು ಕೊಡಿಸಿಕೊಡಲು ಮಾನ್ಯ ಪೊಲೀಸ್ ಅಧೀಕ್ಷಕ ರವರಿಗೆ ಪತ್ರ ಬರೆದಿರುತ್ತೇನೆ. ನಂತರ ಆರೋಪಿತರಿಗೆ ಮತ್ತು ಪಿಶಯದುದಾರರಿಗೆ ಸಂಬಂಧಿಸಿದ ದಾಖಲೆಗಳನ್ನು ಮತ್ತು ಮೊಬೈಲ್ ಕರೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ನೋಡಲ್ ಆಫೀಸರ್ ರವರಿಂದ ಪಡೆದುಕೊಂಡಿರುತ್ತೇನೆ. ಜೊತೆಗೆ ಸದರಿ ದಾಖಲೆಗೆ ಸಂಬಧಪಟ್ಟ 65(ಬಿ) ಪ್ರಮಾಣ ಪತ್ರವನ್ನು ಸಹ ಜಿಯೋ ಕಂಪನಿಯಿಂದ ಪಡೆದುಕೊಂಡಿರುತ್ತೇನೆ. ಸಾಕ್ಷಿಯೂ ದಿ.15.07.2019 ರ ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.39(ಪುಟ ಸಂಖ್ಯೆ 131) ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.39(ಎ) ಎಂದು ಗುರುತಿಸಲಾಯಿತು. ಸಾಕ್ಷಿಯೂ **CDR** ಮತ್ತು **CAF Form** ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.40(ಪುಟ ಸಂಖ್ಯೆ 133) ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.40(ಎ) ಎಂದು ಗುರುತಿಸಲಾಯಿತು. ಸಾಕ್ಷಿಯೂ ಕಲಂ 65(ಬಿ) ಅಡಿಯ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.41

(ಪುಟ ಸಂಖ್ಯೆ 144) ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.41(ಎ) ಎಂದು ಗುರುತಿಸಲಾಯಿತು.

39. ದಿ.16.07.2019 ರಂದು ಪಂಚನಾಮ ಕಾಲದಲ್ಲಿ ಅಮಾನತ್ತುಪಡಿಸಿಕೊಂಡ ಮಾಲುಗಳನ್ನು ವಿಶ್ಲೇಷಣಾ ವರದಿಯನ್ನು ಪಡೆದುಕೊಳ್ಳಲು ಸಾರ್ವಜನಿಕ ಆರೋಗ್ಯ ಸಂಸ್ಥೆ ಮತ್ತು ಎಫ್ ಎಸ್ ಎಲ್ ಗೆ ಕಳುಹಿಸಲು ಸಮುಚಿತ ಮಾರ್ಗದಲ್ಲಿ ಅನುಮತಿ ನೀಡಲು , ಎಸ್.ಪಿ. ಮತ್ತು ಎಸಿಬಿ ಮೈಸೂರು ರವರಿಗೆ ಪತ್ರವನ್ನು ಬರೆದಿರುತ್ತೇನೆ. ಸಾಕ್ಷಿಯೂ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.42 (ಪುಟ ಸಂಖ್ಯೆ 54 ರಿಂದ 59)ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.42(ಎ) ಎಂದು ಗುರುತಿಸಲಾಯಿತು.

40. ನಂತರ ದಿ.20.07.2019 ರಂದು ಪೊಲೀಸ್ ಅಧೀಕ್ಷಕರು , ರಾಸಾಯನಿಕ ಪರೀಕ್ಷಕರು, ಸಾರ್ವಜನಿಕ ಆರೋಗ್ಯ ಸಂಸ್ಥೆ ರವರಿಗೆ ಸಮುಚಿತ ಮಾರ್ಗದಲ್ಲಿ **Articles** ಗಳನ್ನು ಕಳುಹಿಸಲು ಪತ್ರವನ್ನು ನೀಡಿರುತ್ತಾರೆ. ಸಾಕ್ಷಿಯೂ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.43 (ಪುಟ ಸಂಖ್ಯೆ53) ಎಂದು ಗುರುತಿಸಲಾಯಿತು.

41. ನಂತರ ಎಫ್ ಎಸ್ ಎಲ್‌ಗೆ ಸಮುಚಿತ ಮಾರ್ಗದಲ್ಲಿ, ಧ್ವನಿ ಪರೀಕ್ಷೆಗೆ ಕಳುಹಿಸಲು ಕೋರಿಕೆ ಪತ್ರವನ್ನು ಬರೆದಿದ್ದು, ಆ ಪ್ರಕಾರ ದಿ.20.07.2019 ರಂದು ಪೊಲೀಸ್ ಅಧೀಕ್ಷಕರು, **Articles** ಗಳನ್ನು ಸಮುಚಿತ ಮಾರ್ಗದ ಮೂಲಕ ಕಳುಹಿಸಿಕೊಟ್ಟಿರುತ್ತಾರೆ. ಸಾಕ್ಷಿಯೂ ದಿ.16.07.2019 ರ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.44 (ಪುಟ ಸಂಖ್ಯೆ 64 ರಿಂದ 69) ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.44(ಎ) (ಪುಟ ಸಂಖ್ಯೆ69)

ಎಂದು ಗುರುತಿಸಲಾಯಿತು. ಸಾಕ್ಷಿಯೂ ದಿ.20.07.2019 ರ ಪೊಲೀಸ್ ಅಧೀಕ್ಷಕರ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.45 (ಪುಟ ಸಂಖ್ಯೆ63) ಎಂದು ಗುರುತಿಸಲಾಯಿತು.

42. ನಂತರ ಭಾರ್ಗವ ಹೋಟೆಲ್ ನಲ್ಲಿ ಸಿಸಿ ಟಿವಿ ಕ್ಯಾಮಾರ ಇದೆಯೇ ಎಂಬುದರ ಬಗ್ಗೆ ಹಾಗೂ ಕೃತ್ಯ ನಡೆದ ಸಮಯದಲ್ಲಿ ಇದ್ದಂತಹ ಕ್ಯಾಷಿಯರ್ ಮತ್ತು ಸಪ್ಲೈಯರ್ ಗಳನ್ನು ಕಳುಹಿಸಿಕೊಡುವಂತೆ ಮಾಲೀಕರು ಭಾರ್ಗವ ಹೋಟೆಲ್ ರವರಿಗೆ ಪತ್ರವನ್ನು ಬರೆದಿರುತ್ತೇನೆ. ಹಾಗೂ ಆರೋಪಿತರ ಸೇವಾ ವಿವರದ ಮಾಹಿತಿ ಮತ್ತು ದೃಢೀಕೃತ ದಾಖಲೆಗಳ ನೀಡಲು ಚಾಸಾ.5 ರವರಿಗೆ ವಿನಂತಿಸಿಕೊಂಡಿರುತ್ತೇನೆ. ಸಾಕ್ಷಿಯೂ ದಿ.20.07.2019 ರಂದು ಭಾರ್ಗವ ಹೋಟೆಲ್ ಮಾಲೀಕರಿಗೆ ನೀಡಿದ ತಿಳುವಳಿಕೆ ನೋಟೀಸ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.46 (ಪುಟ ಸಂಖ್ಯೆ 116 ಮತ್ತು 117) ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.46(ಎ) ಎಂದು ಗುರುತಿಸಲಾಯಿತು. ಸಾಕ್ಷಿಯೂ ದಿ.20.07.2019 ರಂದು ಘಟಕ ವ್ಯವಸ್ಥಾಪಕರಿಗೆ ಬರೆದ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.47 (ಪುಟ ಸಂಖ್ಯೆ 79) ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.47(ಎ) ಎಂದು ಗುರುತಿಸಲಾಯಿತು.

**(ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಾಯಾವಕಾಶ ಕೋರಿದ್ದು, ಸಮಯ ನೀಡಿ ಮುಂದುರೆದ ಮುಖ್ಯ ವಿಚಾರಣೆಯನ್ನು ಮಂದೂಡಲಾಯಿತು.)**

**Spl.C.No.156/21**
**P.W.-7**
**C.W.-25**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು,
ಮೈಸೂರು.